■ ರಾಮ್‌ಕದಮ್

# ಕಟ್ಟಡದ ನಕಾಶೆ ರಚಿಸುವ ಮುನ್ನ



ಎಐ ಚಿತ್ರ

ಕಟ್ಟಡದ ನಕಾಶೆಯ ರಚನೆ ಎಂದಾಕ್ಷಣ, ಅಗತ್ಯ ಕೋಣೆಗಳಿಗೆ ಅನುಗುಣವಾಗಿ ಗೋಡೆಗಳನ್ನು ರಚಿಸಿ, ಅದಕ್ಕೆ ಬಾಗಿಲು, ಕಿಟಕಿಗಳನ್ನು ಹೊಂದಿಸುವುದು ಎಂದಾಗಿರುತ್ತದೆ. ಇದಕ್ಕೆ ಪರಿಪೂರ್ಣ ನಕಾಶೆ ಎನ್ನಲಾಗದು. ಬಹುತೇಕ ಕಟ್ಟಡಗಳ ನಕಾಶೆಗಳಲ್ಲಿ ಒಳಾಂಗಣ ವಿನ್ಯಾಸ (ಇಂಟೀರಿಯರ್ ಡಿಸೈನ್) ಮೂಲಭೂತ ಆದ್ಯತೆಯ ವಿಷಯವನ್ನಾಗಿ ಪರಿಗಣಿಸುವುದಿಲ್ಲ. ಕಟ್ಟಡದ ನಿರ್ಮಾಣದ ನಂತರ ಒಳಾಂಗಣ ವಿನ್ಯಾಸದ ಬಗ್ಗೆ ಯೋಚಿಸುವುದೇ ಹೆಚ್ಚು. ವಾಸ್ತವದಲ್ಲಿ ಒಳಾಂಗಣ ವಿನ್ಯಾಸದ ಯೋಜನೆಗಾಗಿ, ಕಟ್ಟಡದ ನಕಾಶೆ ತಯಾರಿಸುವ ಮೊದಲು ಸಾಕಷ್ಟು ಸಮಯ ವ್ಯಯಿಸಿ, ಬದುಕಿನ ಶೈಲಿಯನ್ನು ಮನನಮಾಡಿ, ಪರಿಪಕ್ವವಾದ ಪೇಪರ್‌ವರ್ಕ್ ಮಾಡಬೇಕಾಗಿರುತ್ತದೆ. ಇದರಿಂದ ಒಂದು ಉತ್ತಮ ಯೋಜಿತ ಕಟ್ಟಡ ನಿರ್ಮಿಸಲು ಸಾಧ್ಯವಾಗುತ್ತದೆ.

ಒಂದು ಕಟ್ಟಡದ ಪರಿಪೂರ್ಣತೆಯಲ್ಲಿ ಒಳಾಂಗಣ ವಿನ್ಯಾಸವೇ ಜೀವಾಳ. ಗೋಡೆ, ಕಿಟಕಿ, ಬಾಗಿಲು, ಛಾವಣಿ ಭದ್ರತೆಯ ವಿಷಯವಾಗಿದ್ದರೆ, ಒಳಾಂಗಣ ವಿನ್ಯಾಸ ವಾಸಿಸಲು ಅನುಕೂಲವಾಗುವಂತಹ ವ್ಯವಸ್ಥೆಗಳನ್ನು ಮಾಡಿಕೊಡುತ್ತದೆ. ಬಳಕೆಯ ವಸ್ತುಗಳ ಸಂಯೋಜನೆಯನ್ನು ಕಲಾತ್ಮಕವಾಗಿ ಮಾಡುವುದು, ನೋಡಲು ಅಂದ ಚಂದ ಹೆಚ್ಚಿಸಿ ಆಕರ್ಷಣೆಯನ್ನು ಮೂಡಿಸುವುದು, ಮನೆಯ ಬಗ್ಗೆ ಹೆಮ್ಮೆ ಮೂಡಿಸುವಂತೆ ರೂಪಿಸುವುದು, ಇರಲಿ ಖುಷಿ ಅನ್ನಿಸುವಂತೆ ಮಾಡುವುದೇ ಒಳಾಂಗಣ ವಿನ್ಯಾಸದ ಉದ್ದೇಶ. ಇದು ಮನೆಯವರ ಅಭಿರುಚಿ, ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

## ನಕಾಶೆ ಮತ್ತು ವಿನ್ಯಾಸ

ಕಟ್ಟಡದ ನಕಾಶೆಯಲ್ಲಿ ಒಳಾಂಗಣ ವಿನ್ಯಾಸದ ವಿಷಯವನ್ನು ಪರಿಗಣಿಸದೇ ಇರುವುದರಿಂದ, ಪೀಠೋಪಕರಣಗಳು ಜೋಡಿಸುವಾಗ ಸಮಸ್ಯೆ ಎದುರಾಗಬಹುದು. ಬಟ್ಟೆ ಇಡುವ ಜಾಗ, ಇಸ್ತ್ರಿ ಮಾಡುವ ಸ್ಥಳ, ಮೊಬೈಲ್ ಚಾರ್ಜಿಂಗ್ ಪಾಯಿಂಟ್, ಶೋಕೇಸ್, ಮಂಚ, ಸೋಫಾ, ಟೀಪಾಯಿ, ಡೈನಿಂಗ್ ಟೇಬಲ್ ಜೋಡಿಸುವ ವಿಚಾರದಲ್ಲಿ ಹೊಂದಾಣಿಕೆ ಮಾಡಿಕೊಳ್ಳದೆ ಅನ್ಯಮಾರ್ಗ ಇಲ್ಲ. ಆಗ ದಿನಬೆಳಗಾದರೆ ಸಮಸ್ಯೆ ಎದುರಿಸಬೇಕಾಗುತ್ತದೆ. ಕಿಟಕಿಯಿಂದ ಹಾಯುವ ಬೆಳಕು ಟೀವಿಯ ಮೇಲೆ ಬೀಳುತ್ತಿಲ್ಲ. ಓಡಾಡಿದರೆ ಟೀವಿ ವೀಕ್ಷಿಸುತ್ತ ಕುಳಿತವರಿಗೆ ಯಾವುದೇ ಅಡಚಣೆಯಾಗದಂತೆ ಕಟ್ಟಡದ ನಕಾಶೆ ಪೂರ್ವದಲ್ಲಿಯೇ ಒಳಾಂಗಣದ ಬಗ್ಗೆ ಸ್ಪಷ್ಟತೆ ಇರಬೇಕು. ಅದಕ್ಕೆ ಮನೆ ಮಾಲೀಕರ ಬದುಕಿನ ಶೈಲಿ ಮುಖ್ಯ ಆಗುತ್ತದೆ. ಒಳಾಂಗಣ ವಿನ್ಯಾಸ ಮಾಡುವಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಪ್ರಮಾಣೀಕೃತ ಅಳತೆಗೆ ಆದ್ಯತೆ ಇರಲಿ. ಇಲ್ಲವೇ ಮನೆಯಲ್ಲಿರುವ ವ್ಯಕ್ತಿಗಳ ಅನುಕೂಲಕ್ಕೆ ತಕ್ಕಂತೆ ಮತ್ತು ಮನೆಯ ಗಾತ್ರಕ್ಕೆ ಅನುಗುಣವಾಗಿ ವಿನ್ಯಾಸಗೊಳಿಸಬೇಕು.

ಮನೆಯ ನಕಾಶೆ ರಚಿಸುವಾಗ ಸಾಧ್ಯವಾದಷ್ಟು ಏಕಾಂತ ಸ್ಥಳಕ್ಕೆ ಆದ್ಯತೆ ಇರಲಿ. ಟೀವಿ ವೀಕ್ಷಿಸುವಾಗ, ಮಾತನಾಡುತ್ತ ಕುಳಿತಾಗ, ಮಲಗಿದಾಗ, ಊಟಕ್ಕೆ ಕುಳಿತಾಗ ನಡುವೆ ಮತ್ತೊಬ್ಬರಿಂದ ಅಡಚಣೆಯಾಗದಂತಿರಬೇಕು.

## ಮನೆ ಎಂದರೆ ಕನಸು

ಒಂದು ಮನೆ ಕಟ್ಟುವುದೆಂದರೆ, ಅದರ ಸುತ್ತಲೂ ಅನೇಕ ಕನಸು ಕಲ್ಪನೆಗಳಿರುತ್ತವೆ. 'ಮನೆ ಕಟ್ಟಿದರೆ ನೋಡು ಹೇಗೆ ಕಟ್ಟುತ್ತೇನೆ.' ಎಂದು ಅನೇಕರು ಹೇಳುವುದನ್ನು ನೀವೂ ಕೇಳಿರಬಹುದು. ಅಂತಹ ಕನಸಿನ ಮನೆ ಕಟ್ಟಲು ನಿವೇಶನವನ್ನು ಆಯ್ಕೆ ಮಾಡುವಾಗಲೂ ಸಾಕಷ್ಟು ಶ್ರಮವಹಿಸಿರುತ್ತಾರೆ. ಇಷ್ಟೆಲ್ಲ ಆದ ನಂತರ, ಎಂಜಿನಿಯರ್ ಮನೆಯ ನಕಾಶೆಯನ್ನು ತಯಾರಿಸುವ ಮುನ್ನ ಮಾಲೀಕರಿಗೆ, 'ನಿಮ್ಮ ಮನೆ ಹೇಗಿರಬೇಕೆಂದು ಇಚ್ಛಿಸುತ್ತೀರಿ' ಎಂದು ಕೇಳುತ್ತಾರೆ. ಅದರಂತೆ ನಕಾಶೆ ತಯಾರಿಸುತ್ತಾರೆ. ಆಗ ನೋಡಿ ಶುರುವಾಗುತ್ತದೆ ನಿಜವಾದ ಪರೀಕ್ಷೆ. ಹಿಂದೆ ಕಂಡಿರುವ ಯಾವ ಕಲ್ಪನೆಗಳನ್ನೂ ನಿಜರೂಪಕ್ಕೆ ಇಳಿಸಲು ಸಾಧ್ಯವೇ ಆಗುವುದಿಲ್ಲ. ಆಗ ಅವರು ಮಾಡುವುದೇನೆಂದರೆ, ತಮಗೆ ಮೆಚ್ಚುಗೆಯಾದ ಕೆಲವು ಮನೆಗಳನ್ನು ಸುತ್ತಿ, ಅಲ್ಲಿಯ ಭಾಗಗಳನ್ನು ಆಯ್ದು, ತಮ್ಮ ಮನೆಯ ಕಟ್ಟಡದಲ್ಲಿ ಜೋಡಿಸಲು ಪ್ರಯತ್ನಿಸುತ್ತಾರೆ. ಅದರಂತೆ ನಕಾಶೆ ರೂಪಿಸಲು ಹೇಳುತ್ತಾರೆ.

ಮನುಷ್ಯ ಹುಟ್ಟಿನಿಂದ ಸಾಯುವ ತನಕ ಮನೆಯನ್ನೇ ಆಶ್ರಯಿಸಿರುತ್ತಾನೆ. ಆದರೂ ತನ್ನ ಮನೆ ಹೇಗೆ ಕಟ್ಟಿಕೊಳ್ಳಬೇಕೆಂಬ ಸ್ಪಷ್ಟತೆ ಹೊಂದಿರುವುದಿಲ್ಲ. ಇದು ನಿಜಕ್ಕೂ ಅಚ್ಚರಿಗೊಳಿಸುತ್ತದೆ. ಈ ಸಮಸ್ಯೆ ಹೋಗಲಾಡಿಸಲು ಇರುವ ಏಕೈಕ ಉಪಾಯ ತಮ್ಮ ಜೀವನಶೈಲಿ ಹೇಗಿದೆ ಎಂಬುದನ್ನು ಮೊದಲು ಮನದಟ್ಟು ಮಾಡಿಕೊಳ್ಳಬೇಕು. ಎರಡನೆಯದು, ತಾವು ಬಳಸುವ ವಸ್ತುಗಳು ಅಥವಾ ತಮಗೆ ಅಗತ್ಯವಾದ ವಸ್ತುಗಳು, ಎಂದರೆ, ಮಂಚ, ಟೇಬಲ್, ಸೋಫಾ, ಟೀಪಾಯಿ ಹೀಗೆ ಯಾವುವು ಎನ್ನುವ ಪಟ್ಟಿಯನ್ನು ಮೊದಲು ಮಾಡಿಕೊಂಡುಬಿಟ್ಟರೆ ನಿಮ್ಮ ಕೆಲಸ ಸರಳವಾಗುತ್ತದೆ. ಇದೇ ಇಂಟೀರಿಯರ್ ಡಿಸೈನ್‌ನಲ್ಲಿ ಬಳಸುವ ಸೂತ್ರ. ಇದಾದ ಬಳಿಕ ಅಗತ್ಯಗಳಿಗೆ ಅನುಗುಣವಾಗಿ ನಕಾಶೆ ರೂಪಿಸುವುದರಿಂದ ಅದು ನಿಮ್ಮ ಅಚ್ಚುಮೆಚ್ಚಿನ ಮನೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ■

